# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 1125 |
| ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಆಧಾರಿತ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಜನ ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮೃತಪಟ್ಟವವರ ಮಾಹಿತಿ ನೀಡುವುದು) | ಕೃಷಿ ಆಧಾರಿತ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಜನ ಮೃತಪಟ್ಟಿರುವ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಈ ರಾಸಾಯನಿಕ ಗೊಬ್ಬರ ಖರೀದಿಸುವುದಕ್ಕೆ ಸರ್ಕಾರದ ನೀತಿ ನಿಯಮಗಳು ಏನು; | ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ರಸಗೊಬ್ಬರದಲ್ಲಿ ನೇರ ನಗದು ವರ್ಗಾವಣೆ ಯೋಜನೆಯಡಿ (Direct Benefit Transfer in Fertilizer) ದಿನಾಂಕ 01.01.2018 ರಿಂದ ಪಾಯಿಂಟ್ ಆಫ್ ಸೇಲ್ ಉಪಕರಣದಿಂದ ಮಾರಾಟ ಮಾಡಲಾಗುತ್ತಿದ್ದು, ರೈತರು ತಮ್ಮ ಆಧಾರ್ ಸಂಖ್ಯೆ ಮತ್ತು ಬಯೋಮೆಟ್ರಿಕ್ ನೀಡಿ ರಸಗೊಬ್ಬರಗಳನ್ನು ಪಡೆಯಬಹುದಾಗಿದೆ.<br><br>ರೈತರು ಪ್ರತಿ ಮಾಹೆಯಲ್ಲಿ ಗರಿಷ್ಠ 50 ಚೀಲ ರಸಗೊಬ್ಬರವನ್ನು ಖರೀದಿಸಬಹುದಾಗಿದೆ. ಪ್ಲಾಂಟೇಷನ್ ಬೆಳೆಗಾರರು ಒಂದು ಸಾಲಿನಲ್ಲಿ ಪ್ರತಿ ಹೆಕ್ಟೇರ್ ಗೆ 36 ಚೀಲ ರಸಗೊಬ್ಬರವನ್ನು ಖರೀದಿಸಲು ಅರ್ಹರಿರುತ್ತಾರೆ. ದೊಡ್ಡ ಹಿಡುವಳಿಯನ್ನು ಹೊಂದಿರುವ ಕಾರ್ಪೊರೇಟ್ ಸಂಸ್ಥೆಗಳು/ಪ್ಲಾಂಟೇಷನ್ ಬೆಳೆಗಾರರು ಅಧಿಕ ರಸಗೊಬ್ಬರದ ಬೇಡಿಕೆಯಿದ್ದಲ್ಲಿ ಜಿ.ಎಸ್.ಟಿ ಸಂಖ್ಯೆ ಮತ್ತು ಹಿಡುವಳಿ ಪ್ರಮಾಣ ಪತ್ರವನ್ನು ಒದಗಿಸಿ ಪ್ರಯೋಜನವನ್ನು ಯಾವುದೇ ಗರಿಷ್ಠ ಪರಿಮಿತಿ ಇಲ್ಲದೆ ಪಡೆಯಬಹುದಾಗಿರುತ್ತದೆ.<br><br>ಮುಂದುವರೆದು, ಕೇಂದ್ರ ಸರ್ಕಾರವು, ಕೃಷಿಯೇತರ ಚಟುವಟಿಕೆಗೆ ಯೂರಿಯಾ ರಸಗೊಬ್ಬರದ ಬಳಕೆಯನ್ನು ಮಿತಿಗೊಳಿಸಲು ಅತಿ ಹೆಚ್ಚು ಪ್ರಮಾಣದ ಯೂರಿಯಾ ರಸಗೊಬ್ಬರವನ್ನು |

| | | |
|---|---|---|
| | | ಖರೀದಿಸುವ ರೈತರನ್ನು top 20 urea buyers /ಟಾಪ್ 20 ಯೂರಿಯಾ ಖರೀದಿದಾರರೆಂದು ಪಟ್ಟಿ ಮಾಡಿ, ಬೆಳೆ ಮತ್ತು ವಿಸ್ತೀರ್ಣಕ್ಕೆ ಅನುಗುಣವಾಗಿ ಖರೀದಿಸುವ ಬಗ್ಗೆ ಪರಿಶೀಲನೆಯನ್ನು ಕೈಗೊಂಡು iFMS ಪೋರ್ಟಲ್‌ನಲ್ಲಿ ವರದಿಗಳನ್ನು ಅಪ್ ಲೋಡ್ ಮಾಡಲಾಗುತ್ತಿದೆ |
| ಇ) | ಪ್ರಾಣಕ್ಕೆ ಹಾನಿ ಇರುವ ರಾಸಾಯನಿಕ ಗೊಬ್ಬರ ಖರೀದಿಸುವುದಕ್ಕೆ ಸರ್ಕಾರ ನಿಬಂಧನೆಗಳನ್ನು ವಿಧಿಸಿದೆಯೇ ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು? | ರಸಗೊಬ್ಬರ (ನಿಯಂತ್ರಣ) ಆದೇಶ, 1985 ರನ್ವಯ ಪ್ರಾಣಕ್ಕೆ ಹಾನಿ ಇರುವ ಯಾವುದೇ ರಾಸಾಯನಿಕ ಗೊಬ್ಬರ ಅಧಿಸೂಚನೆಯಾಗಿರುವುದಿಲ್ಲ.<br><br>ಆದಾಗ್ಯೂ, ರೈತರು ರಸಗೊಬ್ಬರ ಬಳಸುವಾಗ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ, ಇಲಾಖೆಯ ತರಬೇತಿ /ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. |

ಸಂಖ್ಯೆ: AGRI/33/ACT/2023

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು